ನಿಂದಲಾದರೂ ಅವರಿಗೆ ಮಾರ್ಚ್‌ನೊಳಗಾದರೂ ಸ್ವಲ್ಪ ಹಣವನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಬೇರೆ ಇಲಾಖೆಯವರು ಇದನ್ನು ತೀರ್ಮಾನ ಮಾಡಬೇಕೆಂದು ತಾವು ಹೇಳಿದರೆ, ಅದು ಆಗದ ಕೆಲಸ, ಆ ಕೆಲಸ ಆಗುವುದೇ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

ನಿಯಮ 334 ರ ಮೇರೆಗೆ

ಒಂದಂಕಿ ಲಾಟರಿಯನ್ನು ನಿಷೇಧಿಸುವ ಬಗ್ಗೆ

ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ): ಸನ್ಮಾನ್ಯ ಅಧ್ಯಕ್ಷರೇ, ಒಂದಂಕಿ ಲಾಟರಿಯನ್ನು ನಿಷೇಧಿಸುವ ಬಗ್ಗೆ ಸರ್ಕಾರ ಹಿಂದೆಯೇ ಗಮನ ಹರಿಸಿದ್ದು ಈವರೆಗೂ ನಿಷೇಧಿಸಿರುವುದಿಲ್ಲ. ಇದರಿಂದ ಬಹಳಷ್ಟು ಸಂಸಾರಗಳು ಹಾಳಾಗಿವೆ ಹಾಗೂ ಹಾಳಾಗುತ್ತಿವೆ. ಸರ್ಕಾರ ಅಧಿಕೃತವಾಗಿ ನಿಷೇಧಾಜ್ಞೆಯನ್ನು ಜಾರಿ ಮಾಡದಿದ್ದಾಗ್ಯೂ ಪೋಲೀಸರ ಉದ್ದೇಶ ಎಷ್ಟೇ ಒಳ್ಳೆಯದಿದ್ದಾಗ್ಯೂ ಪೋಲೀಸ್ ಅಧಿಕಾರಿಗಳೇ ಕ್ರಮ ಕೈಗೊಳ್ಳುತ್ತಿರುವುದರಿಂದ ಹೆಚ್ಚಿನ ದುಷ್ಪರಿಣಾಮ ಆಗುತ್ತಿದೆ. ಆದ್ದರಿಂದ ಸರ್ಕಾರ ಅಧಿಕೃತವಾಗಿ ಒಂದಂಕಿ ಲಾಟರಿಯನ್ನು ನಿಷೇಧಿಸುವ ಹಾಗೂ ಒಂದಂಕಿ ಲಾಟರಿ ಮಾರಾಟ ಮಾಡುವವರನ್ನು ಪ್ರತಿಬಂಧಿಸುವ ಆಜ್ಞೆ ಹೊರಡಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆಯನ್ನು ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

ನಮ್ಮ ರಾಜ್ಯದ "ಮೈಸೂರು ಲಕ್ಷ್ಮಿ" ಒಂದಂಕಿ ಲಾಟರಿಯನ್ನು ಅದರ ದುಷ್ಪರಿಣಾಮವನ್ನು ಅರಿತು ದಿನಾಂಕ : 29.11.1992 ರಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ. ಭಾರತದ ಸಂವಿಧಾನದ ಅನುಚ್ಛೇದ 258(1)ರಲ್ಲಿ ರಾಷ್ಟ್ರಪತಿಯವರಿಗೆ ನೀಡಲಾದ ಪ್ರಾಧಿಕಾರದನ್ವಯ ರಾಜ್ಯ ಅಥವಾ ಕೇಂದ್ರ ಸರ್ಕಾರ ಲಾಟರಿಯನ್ನು ನಡೆಸುತ್ತಿರುವುದು.

ಲಾಟರಿಗಳಿಗೆ ಸಂಬಂಧಪಟ್ಟಂತೆ ಕಾನೂನು ರೂಪಿಸುವ ಅಧಿಕಾರ ಕೇವಲ ಸಂಸತ್ತಿಗೆ ಮಾತ್ರ ಇರುತ್ತದೆಯೆಂದೂ ಇದರ ಬಗ್ಗೆ ಕಾನೂನು ರೂಪಿಸುವ ಅಧಿಕಾರವನ್ನು ರಾಜ್ಯಗಳು ಹೊಂದಿರುವುದಿಲ್ಲವೆಂದೂ ಸರ್ವೋಚ್ಚ ನ್ಯಾಯಾಲಯ ತೀರ್ಪಿತ್ತಿದೆ. ಆದುದರಿಂದ ಒಂದು ರಾಜ್ಯದ ಲಾಟರಿ ಟಿಕೇಟುಗಳ ಮಾರಾಟವನ್ನು ಇನ್ನೊಂದು ರಾಜ್ಯ ಸರ್ಕಾರವು ನಿಷೇಧಿಸಲು ಅವಕಾಶವಿರುವುದಿಲ್ಲ. ಇದರಿಂದಾಗಿ, ನಾನು ಇತರೆ ರಾಜ್ಯಗಳ ಒಂದಂಕಿ ಲಾಟರಿಯನ್ನು ನಿಷೇಧಿಸುವ ಅಧಿಕಾರವನ್ನು ರಾಜ್ಯಕ್ಕೆ ನೀಡಬೇಕೆಂದು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತೇನೆ.

(2) ಹಾಲು ಉತ್ಪಾದಕರುಗಳಿಗೆ ಹಣ ಪಾವತಿ ಮಾಡದೇ ಇರುವುದು

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಸನ್ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಾದ್ಯಂತ ಸುಮಾರು ಐದುನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಹಾಲಿನ ಉತ್ಪಾದಕರ ಸಹಕಾರ ಸಂಘಗಳಿದ್ದು ಈ ಹಾಲಿನ ಉತ್ಪಾದಕರ ಸಹಕಾರ ಸಂಘಕ್ಕೆ ಹಾಲಿನ ಉತ್ಪಾದಕರು ಹಾಲಿನ ಸರಬರಾಜು ಮಾಡಿದ್ದು, ಈ ಹಾಲಿನ ಉತ್ಪಾದಕರಿಗೆ ಕಳೆದ ಎಂಟರಿಂದ ಹತ್ತು ವಾರಗಳು ಹಾಲನ್ನು ಸರಬರಾಜು ಮಾಡಿರುವ ಹಣವೇ ಪಾವತಿಯಾಗದೇ ತೊಂದರೆಯಾಗಿದ್ದು, ರೈತರು ಸಮಸ್ಯೆಯಲ್ಲಿ ಸಿಲುಕಿದ್ದು ಮಂಡ್ಯ ಜಿಲ್ಲೆಯಾದ್ಯಂತ ತುಂಬಾ ಗಂಭೀರವಾದ ಪರಿಸ್ಥಿತಿ ಇದೆ.